**ಬೇಸರ** ‘ಗ್ರಾಮೀಣ ಜ್ಞಾನ ಸಮುಚ್ಚಯಗಳು’ ಗ್ರಂಥ ಬಿಡುಗಡೆ | ಸಮರ್ಪಕ ಪುಸ್ತಕ ಖರೀದಿಸುತ್ತಿಲ್ಲ: ಸಭಾಪತಿ

# ಲೈಬ್ರರಿಗೆ ಪುಸ್ತಕ ಖರೀದಿ ವಿಳಂಬ ಸಲ್ಲ: ಹೊರಟ್ಟಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕರ್ನಾಟಕ ಗ್ರಂಥಾಲಯ ಇಲಾಖೆ ಮೂಲಕ ಲೇಖಕರಿಂದ ಪ್ರತಿ ವರ್ಷವೂ ಸಮರ್ಪಕವಾಗಿ ಪುಸ್ತಕಗಳನ್ನು ಖರೀದಿಸುತ್ತಿಲ್ಲ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಬೇಸರ ವ್ಯಕ್ತಪಡಿಸಿದರು.

ಗಾಂಧಿ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗ್ರಂಥಾಲಯ ಇಲಾಖೆ ನಿವೃತ್ತ ನಿರ್ದೇಶಕಪಿ.ವೈ.ರಾಜೇಂದ್ರಕುಮಾರ್ಅವರ‘ಗ್ರಾಮೀಣ ಜ್ಞಾನ ಸಮುಚ್ಚಯಗಳು: ಒಂದು ಪರಿಕಲ್ಪನೆ’ ಗ್ರಂಥ ಲೋಕಾರ್ಪಣೆಗೊಳಿಸಿ ಮಾತನಾಡಿದರು.

ಗ್ರಂಥಾಲಯಇಲಾಖೆಮೂಲಕಲೇಖಕರಿಂದಪ್ರತಿ ವರ್ಷ 300 ಪುಸ್ತಕ ನಿರಂತರವಾಗಿ ಖರೀದಿಸಲು ಸರ್ಕಾರ ವ್ಯವಸ್ಥೆ ಮಾಡಬೇಕು. 2006-07ರಲ್ಲಿನಾನು ಗ್ರಂಥಾಲಯಇಲಾಖೆಸಚಿವನಾಗಿದ್ದಾಗಲೇಖಕರಿಂದ 300 ಕನ್ನಡ ಪುಸ್ತಕ ಖರೀದಿಸುವ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗಿತ್ತು. ಆದರೆ ಕೆಲ ವರ್ಷದಿಂದ ಪುಸ್ತಕ ಖರೀದಿ ಸಮರ್ಪಕವಾಗಿ ಆಗುತ್ತಿಲ್ಲ ಎಂದು ವಿಷಾದಿಸಿದರು.

**ಸರ್ಕಾರಕ್ಕೆ ಸೂಚನೆ ನೀಡುವೆ:** ನಾನು ಇಲಾಖೆ ಸಚಿವನಾಗಿದ್ದಾಗ ಪುಸ್ತಕಗಳನ್ನು ನಿರಂತರವಾಗಿ ಖರೀದಿಸಲು ರಾಜೇಂದ್ರಕುಮಾರ್ಅವರಬೆಂಬಲವಿತ್ತು. ಇದರಿಂದ ಲೇಖಕರಿಗೂ ಪ್ರೋತ್ಸಾಹ ದೊರೆಯುವಂತಾಯಿತು.



ಗಾಂಧಿ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗ್ರಂಥಾಲಯ ಇಲಾಖೆಯ ನಿವೃತ್ತ ನಿರ್ದೇಶಕ ಪಿ.ವೈ. ರಾಜೇಂದ್ರಕುಮಾರ್ ಅವರ ‘ಗ್ರಾಮೀಣ ಜ್ಞಾನ ಸಮುಚ್ಚಯಗಳು ಒಂದು ಪರಿಕಲ್ಪನೆ’ ಗ್ರಂಥವನ್ನು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಲೋಕಾರ್ಪಣೆಗೊಳಿಸಿದರು. ಹಿರಿಯ ಸಾಹಿತಿ ಹಂಪ ನಾಗರಾಜಯ್ಯ ಹಾಜರಿದ್ದರು.

ಈಗ ಸಮರ್ಪಕವಾಗಿ ಈ ಕಾರ್ಯ ಆಗುತ್ತಿಲ್ಲ. ಸರ್ಕಾರದ ಹಂತದಲ್ಲಿ ಮಾತನಾಡಿ ಪುಸ್ತಕ ಖರೀದಿಗೆ ಸೂಚನೆ ನೀಡುತ್ತೇನೆ ಎಂದು ಭರವಸೆ ನೀಡಿದರು.

ನನ್ನ ಅವಧಿಯಲ್ಲಿ2600 ಗ್ರಾಮೀಣ ಗ್ರಂಥಾಲಯ ಆರಂಭಿಸಿ ಓದುವ ಸಂಸ್ಕೃತಿಗೆ ಬಲ ತುಂಬಲಾಗಿತ್ತು. ಆ.12 ರಂದು ರಾಷ್ಟ್ರೀಯ ಗ್ರಂಥಾಲಯ ದಿನ ಆಚರಣೆಗೆ ಆದ್ಯತೆ ನೀಡಲಾಗಿತ್ತು. ರಾಜೇಂದ್ರ ಕುಮಾರ್ ಅವರು ನಿವೃತ್ತಿ ನಂತರವೂ ಸಕ್ರಿಯರಾಗಿ ಕೆಲಸ ಮಾಡುತ್ತಿರುವುದು ಮಾದರಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಹಿರಿಯಸಾಹಿತಿಹಂಪನಾಗರಾಜಯ್ಯ ಮಾತನಾಡಿ, ರಾಜೇಂದ್ರಕುಮಾರ್ಅವರಅವಧಿಯಲ್ಲಿ ಗ್ರಂಥಾಲಯ ಇಲಾಖೆಯ ನಿರ್ವಹಣೆಯು ಉತ್ತಮವಾಗಿತ್ತು. ಜೈನ ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳ ಪ್ರಕಟಣೆಗೆ ಪ್ರೋತ್ಸಾಹ ದೊರೆತಿತ್ತು ಎಂದು ಪ್ರಶಂಸಿಸಿದರು. ನಿವೃತ್ತ ಪ್ರಾಂಶುಪಾಲ ಕೆ.ಈ. ರಾಧಾಕೃಷ್ಣ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.